# ಬಂದಿದೆ!!!
# ಎಸ್.ಇ.ಜಡ್. ಎಂಬ ಪೆಡಂಭೂತ...

**ಏಳಿ ಎದ್ದೇಳಿ, ಜಾಗೃತರಾಗಿ! ಎಸ್.ಇ.ಜಡ್. 'ವಸಾಹತುಶಾಹಿ ನೀತಿಯನ್ನು' ಹೊಡೆದೋಡಿಸಿ !!**

**ರೈತರು, ಕೃಷಿ-ಕೂಲಿ ಕಾರ್ಮಿಕರನ್ನು ರಕ್ಷಿಸಿ!!!**

ಬಂಧುಗಳೇ,

ಸ್ವಾತಂತ್ರ್ಯ ಬಂದು 60 ವರ್ಷಗಳಾದರೂ ರೈತರ, ಕಾರ್ಮಿಕರ, ಮಹಿಳೆಯರ, ದಲಿತರ, ಆದಿವಾಸಿಗಳ, ದುಡಿಯುವ ಸಮುದಾಯಗಳ ಶೋಷಣೆ ಇನ್ನೂ ನಿಂತಿಲ್ಲ, ಶೋಷಣೆ, ಅಸಮಾನತೆ ಮತ್ತು ಅನ್ಯಾಯದ ವಿರುದ್ಧ ಹೋರಾಡಿ ಸಮತೆ, ಸ್ವಾವಲಂಬನೆ ಮತ್ತು ಸಾಮಾಜಿಕ ನ್ಯಾಯದ ತತ್ವಗಳ ಸಮಾಜವನ್ನು ನಿರ್ಮಿಸಬೇಕೆಂದು ಹೋರಾಡುತ್ತಿರುವ ರೈತರ, ಕಾರ್ಮಿಕ ಸಮುದಾಯಗಳ, ಮಹಿಳೆಯರ, ದಲಿತರ, ಆದಿವಾಸಿಗಳ ಮತ್ತಿತರ ತಳಸಮುದಾಯಗಳ ಮುಂದೆ ದೈತ್ಯಾಕಾರಾದ ಪೆಡಂಭೂತವೊಂದು ಎಲ್ಲರನ್ನೂ ನುಂಗಲು ತಯಾರಾಗಿದೆ: ಇದುವೇ ವಿಶೇಷ ಆರ್ಥಿಕ ವಲಯ (SEZ) ಎಸ್.ಇ.ಜಡ್.!! ಇದನ್ನು ವಿರೋಧಿಸುವುದು, ಹೊಡೆದೋಡಿಸುವುದು ರೈತ-ಕೂಲಿ ಸಮುದಾಯಗಳ ಅಸ್ತಿತ್ವದ ಮತ್ತು ಸ್ವಾಭಿಮಾನದ ಪ್ರಶ್ನೆಯಾಗಿದೆ.

**ಏನಿದು ಎಸ್.ಇ.ಜಡ್.?:** ಆರ್ಥಿಕ ಅಭಿವೃದ್ಧಿ ಮತ್ತು ಆದಾಯದ ನೆಪದಲ್ಲಿ, ಹಳ್ಳಿಗಳನ್ನೊಳಗೊಂಡು ಸುತ್ತಮುತ್ತಲಿನ ಸಾವಿರಾರು ಫಲವತ್ತಾದ ಕೃಷಿ ಮತ್ತು ಕೃಷಿಯೇತರ ಭೂಮಿಯನ್ನು (ಉದಾ: ನಂದಗುಡಿ ಹೋಬಳಿಯ 36 ಹಳ್ಳಿಗಳ 12,400 ಎಕರೆ ಭೂಮಿ ಮತ್ತು ಅರಣ್ಯ ಇಲಾಖೆಯ 4,000 ಎಕರೆ) ಸ್ವಾಧೀನ ಪಡಿಸಿ, ಖಾಸಗಿ ಕಂಪೆನಿಗಳಿಗೆ ಹಸ್ತಾಂತರ ಮಾಡಿಸಿ ವಿಶೇಷ ಕಾನೂನಿನ ಅಡಿಯಲ್ಲಿ ನಿರ್ವಹಿಸುವ ಈ ವಲಯಗಳೇ ಎಸ್.ಇ.ಜಡ್. ಬಹುರಾಷ್ಟ್ರೀಯ ಕಂಪೆನಿಗಳಿಗೆ ವಿಶೇಷ ರಿಯಾಯ್ತಿಗಳನ್ನು ಕೊಟ್ಟು, ವಿಶೇಷ ಸೌಲಭ್ಯಗಳನ್ನು ಒದಗಿಸಲು ಮತ್ತು ಸಂವಿಧಾನದ ಬೇರೆ ಯಾವುದೇ ಜನಪರ ಕಾನೂನು ಅನ್ವಯವಾಗದೆ ಜನರನ್ನು ಒಕ್ಕಲೆಬ್ಬಿಸುವ ಕಾನೂನನ್ನು ಈವಾಗಲೇ ಕೇಂದ್ರ ಮತ್ತು ಹಲವಾರು ರಾಜ್ಯ ಸರಕಾರಗಳೇ ಮಂಜೂರು ಮಾಡಿವೆ: ಅದುವೇ ಎಸ್.ಇ.ಜಡ್. ಅಧಿನಿಯಮ (SEZ ).

**ಸರಕಾರದ ಹೇಳಿಕೆ ಪ್ರಕಾರ: ಯಾಕೆ ಎಸ್.ಇ.ಜಡ್. (SEZ)?** ರಫ್ತನ್ನು ಹೆಚ್ಚಿಸಿ, ದೇಶದ ಆದಾಯನ್ನು ಹೆಚ್ಚಿಸಲು, ವಾಣಿಜ್ಯ ಮತ್ತು ಕೈಗಾರಿಕೆಯನ್ನು ಪ್ರೋತ್ಸಾಹಿಸಲು ಎಸ್.ಇ.ಜಡ್.ಗಳನ್ನು ಮಾಡುತ್ತಿದೆ. ಬಹಳಷ್ಟು ರಿಯಾಯ್ತಿಗಳನ್ನು ಕೊಟ್ಟು, ದೇಶದ ಎಲ್ಲ ಸೇವಾ – ಮಾರಾಟ – ಕಾರ್ಮಿಕ ಕಾನೂನುಗಳಿಂದ ಬಹುರಾಷ್ಟ್ರೀಯ ಕಂಪೆನಿಗಳನ್ನು ಮುಕ್ತಗೊಳಿಸಿದರೆ ಮಾತ್ರ ವಿದೇಶಿ ಬಂಡವಾಳವನ್ನು ಅವರು ಇಲ್ಲಿ ಹೂಡುತ್ತಾರೆ ಎಂಬುದು ಖಉಫವಕ್ತಾರರ ವಾದ!

**ಎಷ್ಟು ಎಸ್.ಇ.ಜಡ್.(SEZ) ?:** ಈಗಾಗಲೇ 19 ರಾಜ್ಯಗಳಲ್ಲಿ 237 ಎಸ್.ಇ.ಜಡ್.ಗಳಿಗೆ ಅನುಮೋದನೆ ಸಿಕ್ಕಿದೆ. ಸುಮಾರು 500 ಅಧಿಕೃತ ಎಸ್.ಇ.ಜಡ್.ಗಳನ್ನು ಸೃಷ್ಟಿ ಮಾಡುವ ಪ್ರಕ್ರಿಯೆಗೆ ಸರ್ಕಾರ ಚಾಲನೆ ನೀಡಿದೆ.

**ಎಸ್.ಇ.ಜಡ್.ನ ಸತ್ಯ – ಮಿಥ್ಯ ಹಾಗೂ ಲಾಭ – ಹಾನಿ**

**1. 'ಸುಳ್ಳು : 30 ಲಕ್ಷ ಜನರಿಗೆ ಉದ್ಯೋಗ ಸೃಷ್ಟಿ ಆಗುತ್ತದೆ**

**ಸತ್ಯ:** ಭಾರತದ ಕಾರ್ಮಿಕರ ಸಂಖ್ಯೆ 45-50 ಕೋಟಿ. ಬಹು ಸಂಖ್ಯಾತರು (70%) ಕೃಷಿ-ಕೂಲಿ ಆಧಾರಿತವಾದ ಸ್ವಯಂ-ಉದ್ಯೋಗದಲ್ಲಿ ತೊಡಗಿದ್ದಾರೆ. ಶಿಕ್ಷಿತರಿಗೆ ಮತ್ತು ಸಂಘಟಿತ ವಲಯದವರು 8-10 ಕೋಟಿ ಜನರು ಮಾತ್ರ. ಈಗಿನ ತಂತ್ರಜ್ಞಾನದಿಂದ ಕಂಪನಿಗಳಲ್ಲಿ ಶಿಕ್ಷಿತರಿಗೂ ಬಹಳಷ್ಟು ಕಡಿಮೆ ಕೆಲಸಗಳು ಲಭ್ಯ ಇವೆ. ಎಸ್.ಇ.ಜಡ್.ಗಳಿಂದ ಸ್ವಯಂ ಉದ್ಯೋಗದಲ್ಲಿ ತೊಡಗಿದ ಹಲವಾರು ಜನರು ನಿರಾಶ್ರಿತರಾಗುತ್ತಾರೆ, ನಿರುದ್ಯೋಗಿಗಳಾಗುತ್ತಾರೆ! ಸರಕಾರ ಕೆಲಸ / ಉದ್ಯೋಗ ಒದಗಿಸುತ್ತದೆ ಎಂದು ಹೇಳುತ್ತದೆ. ಆದರೆ ಕೆಲಸ ಕಳೆದುಕೊಳ್ಳುವವರ ಬಗ್ಗೆ, ಭೂಮಿ ಮತ್ತು ಮನೆ ಕಳೆದುಕೊಂಡು ನಿರಾಶ್ರಿತರಾಗುವವರ ಬಗ್ಗೆ ನಿಗೂಢ ಮೌನ ವ್ರತವನ್ನು ಕೈಗೊಂಡಿದೆ.

**2. ಸುಳ್ಳು: ದೇಶಕ್ಕೆ ಬಹಳಷ್ಟು ಲಾಭ ಆಗುತ್ತದೆ, ದೇಶದ ಸಂಪತ್ತು ಹೆಚ್ಚುತ್ತದೆ.**

**ಸತ್ಯ:** ರೈತರ, ಕೃಷಿಕರ ಫಲವತ್ತಾದ ಭೂಮಿ ಮತ್ತು ವಸತಿ ಇರುವ ಹಳ್ಳಿಗಳನ್ನೇ ಸರಕಾರ "ಪುಕಸಟ್ಟೆ" ಉಡುಗೊರೆಯಾಗಿ ಖಾಸಗಿ ಬಂಡವಾಳಷಾಹಿಗಳಿಗೆ ಕೊಡುತ್ತದೆ. ರೈತರಿಗೆ, ಸಣ್ಣ ಉದ್ಯಮಿಗಳಿಗೆ ಈವರೆಗೆ ಕೊಡದಂತಹ ಆಮದು-ರಫ್ತು ರಿಯಾಯ್ತಿ, ಆದಾಯ ತೆರಿಗೆ ರಿಯಾಯ್ತಿ, ಮಾರಾಟ ತೆರಿಗೆ-ಅಬಕಾರಿ ಸುಂಕ ರಿಯಾಯ್ತಿ ಇತ್ಯಾದಿಗಳಿಂದ ದೇಶಕ್ಕೆ ತುಂಬಾ ನಷ್ಟವಾಗುತ್ತದೆ. ವಿತ್ತ ಖಾತೆಯೇ ಹೇಳಿದಂತೆ 2010 ರ ವರೆಗೆ ರೂ.1,60,000 ಕೋಟಿ ನಷ್ಟ ದೇಶಕ್ಕೆ ಆಗುತ್ತದೆ.

**3. ಸುಳ್ಳು: ಇದರಿಂದ ದೇಶದ ನಾಗರೀಕರ ಪ್ರಗತಿ ಆಗುತ್ತದೆ**

**ಸತ್ಯ:** ತಜ್ಞರ ಅಂದಾಜಿನ ಪ್ರಕಾರ ಎಸ್.ಇ.ಜಡ್.ಗಳಲ್ಲಿ ಸುಮಾರು 1,14,000 ರೈತರ ಕುಟುಂಬಗಳು ಮತ್ತು ಕನಿಷ್ಟ 82,000 ಕೃಷಿ

ಆಧಾರಿತ ಕೃಷಿ-ಕೂಲಿ ಕಾರ್ಮಿಕರ ಕುಟುಂಬಗಳು ತಮ್ಮ ಹೊಲ-ಮನೆ ಕಳೆದುಕೊಂಡು 'ಪಲ್ಲಟ'ಕ್ಕೆ ಬಲಿಯಾಗುತ್ತಾರೆ (ನಿರಾಶ್ರಿತರಾಗುತ್ತಾರೆ). ಇದರಿಂದ ಪ್ರತೀ ವರ್ಷ ಆಗುವ ನಷ್ಟ ಸುಮಾರು 212 ಕೋಟಿ ರೂಪಾಯಿಗಳು. (ಈ ಸಂಖ್ಯೆ ಕರ-ಕುಶಲ ಕರ್ಮಿಗಳು, ಕ್ಷೌರಿಕರು, ಕಮ್ಮಾರರು, ಅಕ್ಕಸಾಲಿಗರು, ಕುಂಬಾರ ಮುಂತಾದವರನ್ನು ಹೊರತುಪಡಿಸಿ). ನಂದಗುಡಿಯ 36 ಹಳ್ಳಿಗಳ ಹಾಗೆ ಸಾವಿರಾರು ಹಳ್ಳಿಗಳೇ ನಾಶವಾಗುವಾಗ ಆಗುವ ನಷ್ಟ ಅಪಾರ ಮತ್ತು ಹಾನಿ ಲೆಕ್ಕವಿಲ್ಲದ್ದು.

**4. ಸುಳ್ಳು: ಮನೆ ಮಠ, ಹೊಲ-ಭೂಮಿ ಕಳೆದುಕೊಳ್ಳುವ ಎಲ್ಲರಿಗೂ ಸರಕಾರ ಪುನರ್ವಸತಿ ಒದಗಿಸುತ್ತದೆ.**

**ಸತ್ಯ:** ಕಳೆದ 60 ವರ್ಷಗಳಲ್ಲಿ ಬೃಹತ್ ಯೋಜನೆಗಳಲ್ಲಿ ಸುಮಾರು 4-5 ಕೋಟಿ ಜನರು ನಿರಾಶ್ರಿತರಾಗಿದ್ದಾರೆ. 75% ಜನರು ಇನ್ನೂ ಪುನರ್ವಸತಿಗಾಗಿ ಕಾಯುತ್ತಾ ಇದ್ದಾರೆ. ಹಾಗಾದರೆ, ಎಸ್.ಇ.ಜಡ್.ಗಳಿಂದ ನಿರಾಶ್ರಿತರಾದ 2 ಲಕ್ಷಕ್ಕಿಂತಲೂ ಹೆಚ್ಚು ಕುಟುಂಬಗಳಿಗೆ ಯಾವ ರೀತಿ ಪುನರ್ವಸತಿ ಕೊಡಲು ಸಾಧ್ಯವಿದೆ?!

**5. ಸುಳ್ಳು: ಸರಕಾರ ಭೂಮಿ ಕಳೆದುಕೊಳ್ಳುವವರಿಗೆ ಪರಿಹಾರ ಕೊಡುತ್ತದೆ.**

**ಸತ್ಯ:** ಭೂಮಿ ಕಳೆದುಕೊಳ್ಳುವವರಲ್ಲಿ ಕೆಲವರು ಮಾತ್ರ ಅತೀ ದೊಡ್ಡ ರೈತರು. ಬಹು ಸಂಖ್ಯಾತರು ಅತೀ ಸಣ್ಣ ರೈತರು (1-2 ಎಕರೆ). ಇವರಿಗೆ ಸಿಗುವ ಪರಿಹಾರ ಹಣದಲ್ಲಿ ಮತ್ತೆ ಭೂಮಿ, ಮನೆ, ಶಿಕ್ಷಣ ಸಾಧ್ಯವಾಗಲಾರದು. ಕೃಷಿ-ಕೂಲಿ ಕಾರ್ಮಿಕರು, ಕರ-ಕುಶಲಕರ್ಮಿಗಳಿಗೆ ಯಾವ ರೀತಿ ಪರಿಹಾರ ಸಿಗುತ್ತದೆ ಎಂಬುದರ ಬಗ್ಗೆ ಯಾವುದೇ ರೀತಿಯ ಪ್ರಸ್ತಾಪವನ್ನು ಸರಕಾರ ಇನ್ನೂ ಎತ್ತಿಲ್ಲ.

**6. ಸುಳ್ಳು: ಭಾರತ ಸರಕಾರ ಎಸ್.ಇ.ಜಡ್.(SEZ) ಗಾಗಿ ಮತ್ತು ಜನರ ಹಿತರಕ್ಷಣೆಗೆ ಎಸ್.ಇ.ಜಡ್.(SEZ) ಕಾನೂನು ತಂದಿದೆ.**

**ಸತ್ಯ:** ಎಸ್.ಇ.ಜಡ್.(SEZ) ಅಧಿನಿಯಮ ರೈತರಿಂದ ಭೂಮಿ ಕಿತ್ತೆಗೆಯಲು, ಜನರನ್ನು ಹಳ್ಳಿಯಿಂದ ಬಲವಂತವಾಗಿ ಹೊಡೆದೋಡಿಸಲು, ಶ್ರೀಮಂತ ಬಂಡವಾಳಶಾಹಿಗಳ ಹಿತಾಸಕ್ತಿ ಕಾಪಾಡಲು ತಂದಿದೆ. SEZ ಎಂಬ ಪ್ರದೇಶಕ್ಕೆ ಭಾರತ ದೇಶದ ಪಂಚಾಯತ್‌ರಾಜ್, ಕಾರ್ಮಿಕರ ಕಾನೂನು, ಭಾರತದ ಸಂವಿಧಾನದ ಬೇರೆ ಯಾವುದೇ ಕಾನೂನು ಅನ್ವಯವಾಗುವುದಿಲ್ಲ. ಖಾಸಗಿ ಕಂಪನಿಗಳು ಸಂವಿಧಾನದ ವ್ಯಾಪ್ತಿಯ ಹೊರತುಪಡಿಸಿ ತಮ್ಮದೇ ಆಡಳಿತವನ್ನು ನಡೆಸುವವರು ಸರಕಾರದ ಅಭಿವೃದ್ಧಿ ಆಯುಕ್ತರು ಮೂಕ ಪ್ರೇಕ್ಷಕರಾಗಿ ಈ ಎಸ್.ಇ.ಜಡ್.(SEZ) ನಲ್ಲಿ ಇರುವರು.

**7. ಸುಳ್ಳು: ಬರೀ ರೈತರ ಹೊಲಗಳನ್ನು ಮಾತ್ರ ಸರಕಾರ ವಶಪಡಿಸಿಕೊಳ್ಳುತ್ತದೆ (ಹಿಂದಿನ ಉಪನಗರಗಳು ಇದ್ದ ಹಾಗೆ)**

**ಸತ್ಯ:** ಎಸ್.ಇ.ಜಡ್.(SEZ) ಎಂದರೆ ನಮೂದಿಸಿದ ಎಲ್ಲಾ ಭೂಮಿ, ವಸತಿ ಹಳ್ಳಿಗಳು ಮತ್ತು ಎಲ್ಲಾ ಸೌಲಭ್ಯಗಳನ್ನು ಖಾಸಗಿ ಕಂಪನಿಗಳು ವಶಪಡಿಸಿಕೊಂಡು, ಎಲ್ಲರಿಗೂ ಬೇರೆ ಕಡೆ ಸ್ಥಳಾಂತರಿಸುತ್ತಾರೆ. ಪ್ರತಿಯೊಂದು ಹಳ್ಳಿಗಳಲ್ಲಿ ಇದೊಂದು ಸ್ವತಂತ್ರ ವಸಾಹತು ಇದ್ದ ಹಾಗೆ. ಇದರಿಂದ ಹಳ್ಳಿಗಳ ಇತಿಹಾಸ, ಸಂಸ್ಕೃತಿಗಳೆಲ್ಲ ನಾಶವಾಗಿಬಿಡುತ್ತವೆ.

**8. ಎಸ್.ಇ.ಜಡ್.(SEZ) ಬಂಜರು- ಭೂಮಿಯಲ್ಲಿ, ಫಲಪ್ರದವಲ್ಲದ ಭೂಮಿಗಳಲ್ಲಿ ಮಾಡಲಾಗುತ್ತದೆ.**

**ಸತ್ಯ:** ಎಲ್ಲಾ ಎಸ್.ಇ.ಜಡ್.(SEZ)ಗಳು ನಂದಿಗ್ರಾಮ, ಸಿಂಗೂರು, ಚಾಮಲಾಪುರ ಮತ್ತು ಮಂಗಳೂರು ಇಂತಹ ಫಲಪ್ರದ, ಸ್ವಾವಲಂಬಿ, ನೀರು-ಜೀವನೋಪಾಯ ಸೌಲಭ್ಯಗಳು ಇರುವಲ್ಲಿಯೇ ಬಂದಿವೆ. ಸರಕಾರ ಸೂಚಿಸಿದ ಎಲ್ಲಾ ಎಸ್.ಇ.ಜಡ್.(SEZ) ಗಳು ಬಹಳ ಫಲವತ್ತಾದ ಭೂಮಿಗಳಾಗಿವೆ. ಎಸ್.ಇ.ಜಡ್.(SEZ) ಹೆಸರಲ್ಲಿ ಹಳ್ಳಿಗಳೆಲ್ಲಾ ಬಂಜರು ಭೂಮಿಗಳೆಂಬ ಸುಳ್ಳನ್ನು ಸರಕಾರ ಸಾರಾಸಗಟಾಗಿ ಪ್ರಚಾರಿಸುತ್ತಾ ಇದೆ.

## ಯಾರಿಗೆ ಲಾಭ? ಯಾರಿಗೆ ನಷ್ಟ?

ಎಸ್.ಇ.ಜಡ್.(SEZ)ನಿಂದ ರಿಯಲ್ ಎಸ್ಟೇಟ್ ಮಾಫಿಯಾ, ಡೆವಲಪರ್ಸ್, ರಾಜಕಾರಣಿಗಳಿಗೆ, ಬಂಡವಾಳಶಾಹಿಗಳಿಗೆ ವಿವಿಧ ರೀತಿಯಲ್ಲಿ ಅತಿಯಾದ ಲಾಭವಾಗುತ್ತದೆ. ರೈತರ ಕೃಷಿ-ಕೂಲಿ ಕಾರ್ಮಿಕರ, ದಲಿತರ, ಬುಡಕಟ್ಟು ಜನಾಂಗದವರ ಮತ್ತು ಕರ-ಕುಶಲ ಕಾರ್ಮಿಕ ಸಮುದಾಯಗಳ ಬದುಕು, ಅಸ್ತಿತ್ವ, ಸಂಸ್ಕೃತಿ, ಸ್ವಾಭಿಮಾನ ಎಸ್.ಇ.ಜಡ್.(SEZ) ಎಂಬ ಕಣ್ಣುಮುಚ್ಚಾಲೆ ಆಟದಲ್ಲಿ ಚರಿತ್ರೆಯಿಂದಲೇ ಕಣ್ಮರೆಯಾಗುತ್ತದೆ.

**ವಾಸ್ತವಿಕವಾಗಿ ಇದು ಎಸ್.ಇ.ಜಡ್.(SEZ) ಅಲ್ಲ REZ (ರಿಯಲ್ ಎಸ್ಟೇಟ್ ಝೋನ್)**

**ನಮ್ಮ ನೆಲದಲ್ಲಿ ನಾವೆಲ್ಲ ನೆಮ್ಮದಿಯಿಂದ ಬದುಕುವ ಹಂಬಲ, ಸ್ವಾಭಿಮಾನ, ಛಲಗಳಿದ್ದರೆ......**

**ಇಂತಹ ಅನ್ಯಾಯದ ನೀತಿಯನ್ನು ಜನಸಮುದಾಯಗಳು, ಜನಸಂಘಟನೆಗಳು ಮತ್ತು ಪ್ರಜ್ಞಾವಂತ ನಾಗರೀಕರು ಒಗ್ಗಟ್ಟಿನಿಂದ ಹೋರಾಡಿ ತಡೆಗಟ್ಟಲೇಬೇಕು!.**

ರಾಷ್ಟ್ರೀಯ ಜನಾಂದೋಲನಗಳ ಸಮನ್ವಯ - ಕರ್ನಾಟಕ (NAPM)
ಭೂಸ್ವಾಧೀನ ವಿರೋಧಿ ಹೋರಾಟ ಸಮಿತಿ, ನಂದಗುಡಿ (ಹೊಸಕೋಟೆ ತಾಲ್ಲೂಕು)